ಹೊಳೆನರಸೀಪುರದ ಅಪರ ಜೆ.ಎಂ.ಎಫ್.ಸಿ. ರವರ ನ್ಯಾಯಾಲಯದಲ್ಲಿ.

ಸಿ.ಸಿ. ನಂಃ **758/2018**

| | | | |
|---|---|---|---|
| ಸಾಕ್ಷಿಯ ಹೆಸರು | ಃ ಸುಮಂತ್ | ಸಿ.ಡಬ್ಲ್ಯೂ | ಃ 05 |
| ತಂದೆ ಹೆಸರು | ಃ ಭೋಜರಾಜ | ಪಿ.ಡಬ್ಲ್ಯೂ | ಃ 05 |
| ವಯಸ್ಸು | ಃ 30 ವರ್ಷ | ಪ್ರಮಾಣೀಕರಿಸಿದ ದಿಃ | 19/09/2025 |
| ವೃತ್ತಿ | ಃ ಪೇಯಿಂಟ್ ಕೆಲಸ | | |
| ವಾಸ | ಃ ಅಂಬೇಡ್ಕರ್ ನಗರ ಹೊ ನ ಪುರ | | |

ಸಾಕ್ಷಿಗೆ ಪ್ರಮಾಣ ವಚನ ಭೋಧಿಸಲಾಯಿತು.

ಮುಖ್ಯ ವಿಚಾರಣೆಃ- ಮಾನ್ಯ ಎ.ಪಿ.ಪಿ.ಯವರಿಂದಃ

ನನಗೆ ಈ ಪ್ರಕರಣದ ಬಗ್ಗೆ ಏನು ತಿಳಿದಿಲ್ಲ. ನ್ಯಾಯಾಲಯ ಮುಂದಿರು ಆರೋಪಿ ಯಾರೆಂದು ನನಗೆ ಗೊತ್ತಿಲ್ಲ. ನಾನು ಪೊಲೀಸರಿಗೆ ಯಾವುದೇ ಹೇಳಿಕೆ ನೀಡಿಲ್ಲ.

(ಮಾನ್ಯ ಎ.ಪಿ.ಪಿ.ಯವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿ ಕೋರಿರುತ್ತಾರೆ. ಕಲಂ 161 ರ ಹೇಳಿಕೆ ಯನ್ನು ಪರಿಶಿಲೀಸಿ ಪಾಟಿ ಸವಾಲಿಗೆ ಅನುಮತಿ ನೀಡಲಾಯಿತು.)

ಪಾಟೀ ಸವಾಲುಃ - ಮಾನ್ಯ ಎ.ಪಿ.ಪಿ. ರವರಿಂದಃ

ದಿನಾಂಕ 19.06.2018 ರಂದು ರಾತ್ರಿ 7.30 ಗಂಟೆಗೆ ನಾನು ಚಾ ಸಾ 6 ರವರು ಅಂಬೇಡ್ಕರ್ ನಗರದಿಂದ ಸರ್ಕಲ್ ಗೆ ಹೋಗುವಾಗ ಕೆ ಎಸ್ ಆರ್ ಟಿ ಸಿ ಬಸ್ ನಿಲ್ದಾಣದ ಮುಂಭಾಗ ಆಟೋ ನಿಲ್ದಾಣದ ಹತ್ತಿರ ಗಲಾಟೆ ಆಗುತ್ತಿತ್ತು, ಆಗ ನನ್ನ ಪರಿಚಯದ ಚಾ ಸಾ 2 ರವರನ್ನು ವಿಚಾರಿಸಲಾಗಿ ಆರೋಪಿ ಚಾ ಸಾ 1 ರವರು ತಮ್ಮ ಇಲಾಖಾ ಸಿಬ್ಬಂದಿ ಕಿಟ್ ಗಳನ್ನು ಹಾಸನ ಜಿಲ್ಲಾ ಪೋಲೀಸ್ ಕಛೇರಿಯಿಂದ ಕೆ ಎಸ್ ಆರ್ ಟಿ ಸಿ ಬಸ್ ನಿಲ್ದಾಣದಲ್ಲಿ ಇಳಿಸಿ ಅವುಗಳನ್ನು ಹಳ್ಳಿ ಮೈಸೂರಿಗೆ ತೆಗೆದುಕೊಂಡು ಹೋಗಲು ಮೈಸೂರು ಪ್ಲಾಟ್ ಫಾರಂನಿಂದ ಹಳ್ಳಿ ಮೈಸೂರು ಪ್ಲಾಟ್ ಫಾರಂಗೆ ತೆಗೆದುಕೊಂಡು ಹೋಗಲು ಕೆ ಎಸ್ ಆರ್ ಟಿ ಸಿ ಬಸ್ ನಿಲ್ದಾಣದ ಮುಂಭಾಗ ಆಟೋ ನಿಲ್ದಾಣದ ಹತ್ತಿರ ಆರೋಪಿಯು ಸಮವಸ್ತ್ರದಲ್ಲಿದ್ದ ಚಾ ಸಾ 1ರವರ ಸಮವಸ್ತ್ರವನ್ನು ಎಳೆದಾಡಿ ನನ್ನ ಹೆಸರು ಮಂಜ ಅಂಬೆಡ್ಕರ್ ನಗರ ಬೋಳಿಮಗನೆ ಎಂದು ಬೈದು ಅವ್ಯಾಚ್ಯಶಬ್ದಗಳಿಂದ ನಿಂದಸಿ ಚಾ ಸಾ 1 ರವರಿಗೆ ಕಪಾಳಕ್ಕೆ ಹೊಡೆದು ನೋವುಂಟು ಮಾಡಿದ್ದಾನೆ ಎಂದು ಹೇಳಿದರು ಎಂದರೆ ನನಗೆ ಗೊತ್ತಿಲ್ಲ. ಸದರಿ ಕಲಂ 161 ರ ಹೇಳಿಕೆಯನ್ನು ನಿ ಪಿ 3 ಎಂದು ಗುರುತಿಸಲಾಯಿತು.

2. ಆರೋಪಿಗಳು ನನಗೆ ಪರಿಚಯಸ್ಥರಾದರಿಂದ ಅವರೊಂದಿಗೆ ರಾಜೀ ಮಾಡಿಕೊಂಡ ಕಾರಣ ಅವರಿಗೆ ಸಹಾಯ ಮಾಡಲು ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಆರೋಪಿ ಪರ ಪಾಟಿ ಸವಾಲು ಇಲ್ಲ ಎಂದು ತಿಳಿಸಿರುತ್ತಾರೆ.

ಮರು ವಿಚಾರಣೆ ಇಲ್ಲ:

(ಬಹಿರಂಗ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

**ಓ.ಹೇ.ಕೇ.ಸ.ಇ.**

ಅಪರ ಸಿವಿಲ್ ಜಡ್ಜ್ ಮತ್ತು ಜೆಎಂಎಫ್.ಸಿ,
ಹೊಳೆನರಸೀಪುರ